ವಿಧಾನಸೌಧ ದೂರವಾಣಿ ವಿನಿಮಯ ಕೇಂದ್ರವನ್ನು ಎಲೆಕ್ಟ್ರಾನಿಕ್ ವಿನಿಮಯ ಕೇಂದ್ರವನ್ನಾಗಿ ಮಾಡುವುದು

೬೦೪. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ವಿಧಾನಸೌಧ ದೂರವಾಣಿ ವಿನಿಮಯ ಕೇಂದ್ರವನ್ನು ಎಲೆಕ್ಟ್ರಾನಿಕ್ ಎಕ್ಸ್‌ಚೇಂಜ್ ಕೇಂದ್ರವನ್ನಾಗಿ ಪರಿವರ್ತಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಎಷ್ಟು ಸಮಯದಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇದನ್ನು ಪರಿಶೀಲಿಸಲಾಗಿದೆ ಮತ್ತು ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಸುಮಾರು ರೂ. ೬೫ ಲಕ್ಷ.

ಇ) ಪ್ರಸಕ್ತ ವಿನಿಮಯ ಕೇಂದ್ರವನ್ನು ಬದಲಾಯಿಸಿ ಎಲೆಕ್ಟ್ರಾನಿಕ್ ಎಕ್ಸ್‌ಚೇಂಜ್‌ನ್ನು ಸ್ಥಾಪಿಸುವ ಕಾರ್ಯವನ್ನು ಐಟಿಐ ನವರಿಗೆ ವಹಿಸಲಾಗಿದೆ. ಸಚಿವಾಲಯ–೨ ರಲ್ಲಿ ವೈರಿಂಗ್ ಕೆಲಸ ಪೂರ್ಣವಾಗಿದೆ ಮತ್ತು ವಿಧಾನಸೌಧದಲ್ಲಿ ಇದು ಪ್ರಗತಿಯಲ್ಲಿದೆ. ವಿನಿವಯ ಕೇಂದ್ರದ ಕೊಠಡಿಯಲ್ಲಿ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕೆಲಸ ಪೂರ್ಣವಾಗುತ್ತಲಿದೆ. ಐ.ಟಿ.ಐ.ನವರು ಎಲೆಕ್ಟ್ರಾನಿಕ್ ಎಕ್ಸ್‌ಚೇಂಜ್‌ನ ಉಪಕರಣವನ್ನೂ ಕೂಡ ಸರಬರಾಜು ಮಾಡಿದ್ದಾರೆ.

ಈ) ಈ ಕಾರ್ಯ ಇನ್ನು ಮೂರು ತಿಂಗಳಲ್ಲಿ ಪೂರ್ಣವಾಗಬಹುದೆಂದು ನಿರೀಕ್ಷಿಸಲಾಗಿದೆ.

ಬೆಂಗಳೂರು ಜಯನಗರ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಕೊಳಚೆ ಪ್ರದೇಶಗಳ ಬಗ್ಗೆ

೫೬೦. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಜಯನಗರ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು, (ಪ್ರದೇಶದ ಹೆಸರು ಜನಸಂಖ್ಯೆ ಮುಂತಾದ ವಿವರಗಳನ್ನು ನೀಡುವುದು)

ಆ) ಅವುಗಳ ಪೈಕಿ ಬಿ.ಡಿ.ಎ. ನಗರಸಭೆ ಹಾಗೂ ಕೊಳಚೆ ನಿರ್ಮೂಲನಾ ಮಂಡಳಿ ವ್ಯಾಪ್ತಿಗೆ ಬರುವ ಕೊಳಚೆ ಪ್ರದೇಶಗಳಾವುವು.

ಇ) ಬಿ.ಡಿ.ಎ. ನಗರಸಭೆ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯವರು ಈ ಪ್ರದೇಶಗಳಿಗೆ ಒದಗಿಸುವ ನಾಗರೀಕ ಸೌಲಭ್ಯಗಳಾವುವು (ಪ್ರತ್ಯೇಕ ವಿವರಗಳನ್ನು ನೀಡುವುದು).

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೪೧ ಸಂಖ್ಯೆ. ವಿವರಗಳನ್ನು ಅನುಬಂಧ ೧ರಲ್ಲಿ ಕಾಣಿಸಿದೆ(ಅನುಬಂಧ "ಅ" ನೋಡುವುದು)

ಆ) ೧. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ... ೩
೨. ಬೆಂಗಳೂರು ಮಹಾನಗರಪಾಲಿಕೆ ... ೯
೩. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ... ೨೮

ಇ) ಎಲ್ಲಾ ಮೂರು ಸಂಸ್ಥೆಗಳು ಕುಡಿಯುವ ನೀರು ಚರಂಡಿ, ದಾರಿದೀಪ, ಮನೆಗಳ ನಿರ್ಮಾಣ, ವಿದ್ಯುಚ್ಛಕ್ತಿ, ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಒದಗಿಸುತ್ತಿವೆ, ವಿವರಗಳನ್ನು ಅನುಬಂಧ–೩ರಲ್ಲಿ ಕಾಣಿಸಿದೆ.

ಅನುಬಂಧ–ಅ

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಜನಸಂಖ್ಯೆ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ :		
೧	ಜೋಗಿ ಪಾಳ್ಯ	೩೧೫
೨	ರಾಗಿಗುಡ್ಡ	೬೦೦೮
೩	ಅರಸು ಕಾಲೋನಿ	೧೮೧೦
ಬೆಂಗಳೂರು ಮಹಾನಗರ ಪಾಲಿಕೆ :		
೪	ಆಂಜನೇಯ ಸ್ವಾಮಿ ಕೊಳಚೆ ಪ್ರದೇಶ	೭೫೦
೫	ಸಿದ್ಧಾರ್ಥ ಕೊಳಚೆ ಪ್ರದೇಶ	೧೦೨೦
೬	ಕೃಷ್ಣಮೂರ್ತಿ ಕಾಲೋನಿ ಕೊಳಚೆ ಪ್ರದೇಶ	೩೬೦೦
೭	ನಾರಾಯಣಪುರ ಸ್ಲಮ್	೧೮೦೦
೮	ಲಕ್ಕಸಂದ್ರ ಕೊಳಚೆ ಪ್ರದೇಶ	೨೩೫೦
೯	ನಕ್ಕಲಬಂಡ್ ಕೊಳಚೆ ಪ್ರದೇಶ	೧೦೦೦
೧೦	ಸಿದ್ಧಾರ್ಥ ಕೊಳಚೆ ಪ್ರದೇಶ	೨೨೦೫
೧೧	ಹಟ್ಟಿಂಗ್ ಕಾಲೋನಿ ಕೊಳಚೆ ಪ್ರದೇಶ	೧೬೫೫
೧೨	ಮಾರೇನಹಳ್ಳಿ ಟ್ಯಾಂಕ್ ಬಂಡ್ ಕೊಳಚೆ ಪ್ರದೇಶ	೩೦೦೦
ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ :		
೧೩	ಎಡಿಯೂರು ಕೊಳಚೆ ಪ್ರದೇಶ	೧೮೦
೧೪	ಶಾಸ್ತ್ರಿನಗರ ಕೊಳಚೆ ಪ್ರದೇಶ	೩೫೯
೧೫	ಕರೀಸಂದ್ರ ಕೊಳಚೆ ಪ್ರದೇಶ	೫೫೮೫
೧೬	ಕನಕಪುರ ರಸ್ತೆ ಬದಿಯ ಬನಶಂಕರಿ ಕೊಳಚೆ ಪ್ರದೇಶ	೪೭೪
೧೭	ಪುಟ್ಟಯ್ಯನಪಾಳ್ಯ ಕೊಳಚೆ ಪ್ರದೇಶ	೨೮೦
೧೮	ಆಂಜನೇಯಸ್ವಾಮಿ ದೇವಸ್ಥಾನದ ದಕ್ಷಿಣದಲ್ಲಿರುವ ರಾಗಿಗುಡ್ಡ ಕೊಳಚೆ ಪ್ರದೇಶ	೨೮೦೦
೧೯	ಪ್ರಿಯದರ್ಶಿನಿ ಕೊಳಚೆ ಪ್ರದೇಶ	೧೯೯
೨೦	ಡ್ರೈವ್ ಇನ್ ಥಿಯೇಟರ್ ಹಿಂಭಾಗದ ಕೊಳಚೆ ಪ್ರದೇಶ	೨೫೦
೨೧	ತಾವರೆಕೆರೆ ಕೊಳಚೆ ಕೊಳಚೆ ಪ್ರದೇಶ ಸರ್ವೆ ನಂ. ೫	೭೨೫
೨೨	ತಾವರೆಕೆರೆ ಕೊಳಚೆ ಪ್ರದೇಶ ಸರ್ವೆ ನಂ. ೭	೪೧೬
೨೩	ಆಡುಗೋಡಿ ಕೊಳಚೆ ಪ್ರದೇಶ ಸರ್ವೆ ನಂ. ೭೭	೩೨೦
೨೪	ಆಡುಗೋಡಿ ಕೊಳಚೆ ಪ್ರದೇಶ ಸರ್ವೆ ನಂ ೬೬	೯೧೫
೨೫	ಬನ್ನೇರುಘಟ್ಟ ರಸ್ತೆ, ಕ್ವಾರಿಪಿಟ್‌ನಲ್ಲಿರುವ ಕೊಳಚೆ ಪ್ರದೇಶ	—
೨೬	ತಾವರೆಕೆರೆ ಬಜಾಜ್ ಎಸ್ಟೇಟ್ ಕೊಳಚೆ ಪ್ರದೇಶ	—
೨೭	ಕ್ವಾರಿಪಿಟ್ ಕೊಳಚೆ ಪ್ರದೇಶ ಮೈಕೋ ಫ್ಯಾಕ್ಟರಿ ಹತ್ತಿರ	೪೪೦

೨೮	ಸರ್ವೆ ನಂ. ೨೦ ಆಡುಗೋಡಿ, ಮೈಕೋ ಫ್ಯಾಕ್ಟರಿ ಹತ್ತಿರ	೧೬೪
೨೯	ಕೊಜ್ಜೆ ನೀರಿನ ಚರಂಡಿ ಬದಿಯಲ್ಲಿರುವ ಕೊಳಚೆ ಪ್ರದೇಶ, ಶಿಲ್ಪ ಮಾರ್ಬಲ್ ಹತ್ತಿರ, ಬನ್ನೇರುಘಟ್ಟ ರಸ್ತೆ	—
೩೦	ಗುಪ್ತ ಲೇಔಟ್ ಕ್ವಾರಿಪಿಟ್‌ಗೆ ಸೇರಿದ ಕೊಳಚೆ ಪ್ರದೇಶ, ಬನ್ನೇರುಘಟ್ಟ ರಸ್ತೆ	—
೩೧	ಟಿ.ಬಿ. ಆಸ್ಪತ್ರೆ ಕಾಂಪೌಂಡಿಗೆ ಸೇರಿದ ಭೈರಸಂದ್ರ ಹತ್ತಿರದ ಕೊಳಚೆ ಪ್ರದೇಶ	೬೦೦
೩೨	ಮಾಧವನ ಪಾರ್ಕ್ ಜಯನಗರ ಕೊಳಚೆ ಪ್ರದೇಶ	—
೩೩	ಶಂಕರಪ್ಪ ಗಾರ್ಡನ್ ಕೊಳಚೆ ಪ್ರದೇಶ, ಲಾಲ್‌ಬಾಗ್, ಸಿದ್ದಾಪುರ	೨೨೫
೩೪	ದಯಾನಂದ ಕೊಳಚೆ ಪ್ರದೇಶ ಲಾಲ್‌ಬಾಗ್ ಸಿದ್ದಾಪುರ	೪೧೨೫
೩೫	ಗುಲ್ಬರ್ಗಾ ನಿರಾಶ್ರಿತರ ಕ್ಷೇಮಾಭಿವೃದ್ಧಿ ಸಂಘ, ಹೊಸೂರು ರಸ್ತೆ	೭೧೫
೩೬	ಸರ್ವೆ ನಂ. ೧೩ ಅರೆ ಕೆಂಪನಹಳ್ಳಿ ಕೊಳಚೆ ಪ್ರದೇಶ	೪೪೫
೩೭	ಹೊಂಬೇಗೌಡ ನಗರ ಕೊಳಚೆ ಪ್ರದೇಶ	೧೦೦೦
೩೮	ಅಣ್ಣೇಪುರ ಗುಟ್ಟೆ ಆಂಜನೇಯಸ್ವಾಮಿ ದೇವಸ್ಥಾನ ಕೊಳಚೆ ಪ್ರದೇಶ	೭೯೭
೩೯	ವಿಜಯಾ ಕಾಲೇಜ್ ಹಿಂಭಾಗ ಕೊಳಚೆ ಪ್ರದೇಶ	೧೩೯೦
೪೦	ತಾಯಪ್ಪನ ಹಳ್ಳಿ ಕೊಳಚೆ ಪ್ರದೇಶ	೧೫೦

ಅನುಬಂಧ-2

ನಾಗರೀಕ ಸೌಲಭ್ಯಗಳನ್ನು ಒದಗಿಸಿರುವ ವಿವರ

೧) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ — ಇದರ ವ್ಯಾಪ್ತಿಯಲ್ಲಿ ಬರುವ ಜೋಗಿಪಾಳ್ಯ ರಾಗಿಗುಡ್ಡ ಅರಸು ಕಾಲೋನಿ ಕೊಳಚೆ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆ, ಒಳಚರಂಡಿ ನಿರ್ಮಾಣ, ಬೀದಿದೀಪ ಸ್ವಚ್ಛತೆ ಕಾರ್ಯಗಳನ್ನು ಒದಗಿಸಲಾಗಿದೆ. ಈ ಕೊಳಚೆ ನಿವಾಸಿಗಳ ಉಪಯೋಗಕ್ಕಾಗಿ ಸುಲಭ ಸೌಚಾಲಯಗಳ ಮುಖಾಂತರ ಸಾಮೂಹಿಕ ಸ್ನಾನ ಗೃಹ ಮತ್ತು ಸೌಚಾಲಯಗಳನ್ನು ಒದಗಿಸಲಾಗಿದೆ. ಅರಸು ಕಾಲೋನಿ ಕೊಳಚೆ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮನೆಗಳನ್ನು ನಿರ್ಮಿಸಲು ಪರಿಶೀಲಿಸಲಾಗುತ್ತಿದೆ.

೨) ಬೆಂಗಳೂರು ಮಹಾನಗರ ಪಾಲಿಕೆ — ಅನುಬಂಧ-೧ರಲ್ಲಿ ಸೂಚಿಸಿರುವ ೯ ಕೊಳಚೆ ಪ್ರದೇಶಗಳ ರಸ್ತೆ ನಿರ್ಮಾಣ, ಬೀದಿದೀಪ, ಒಳಚರಂಡಿ. ನೀರು ಸರಬರಾಜು ವ್ಯವಸ್ಥೆ, ಸಾರ್ವಜನಿಕ ಶೌಚಾಗೃಹ, ಸಾರ್ವಜನಿಕ ನಲ್ಲಿಗಳು. ಇತ್ಯಾದಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸುತ್ತಿದೆ. ಇವುಗಳ ಜೊತೆಗೆ ಅಂಗನವಾಡಿ ಕೇಂದ್ರಗಳನ್ನು ಕೆಲವು ಕೊಳಚೆ ಪ್ರದೇಶಗಳಲ್ಲಿ ಕಟ್ಟಲಾಗಿದೆ.

೩) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ — ಅನುಬಂಧ-೧ರಲ್ಲಿ ಸೂಚಿಸಲಾಗಿರುವ ೨೮ ಕೊಳಚೆ ಪ್ರದೇಶಗಳ ರಸ್ತೆ, ಒಳಚರಂಡಿ, ನೀರು ಪೂರೈಕೆ, ಸ್ನಾನಗೃಹ ಬೀದಿದೀಪ ಸಮುದಾಯ ಶೌಚಾಗೃಹ ಮುಂತಾದವುಗಳನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಒದಗಿಸಿದೆ. ಇದಲ್ಲದೆ ತಾವರೆಕೆರೆ ಸ.ನಂ.೭ರಲ್ಲಿ ರೂ ೨೩.೦೬ ಲಕ್ಷ ಅಂದಾಜು ವೆಚ್ಚದಲ್ಲಿ ೧೨೮ ಮನೆಗಳನ್ನು ಮತ್ತು ಸರ್ವೆ ನಂ.೫೫ ರಲ್ಲಿ ರೂ. ೧೦.೧೬ ಲಕ್ಷ ಅಂದಾಜು ಮೊತ್ತದಲ್ಲಿ ಕೊಳಚೆ ನಿವಾಸಿಗಳಿಗಾಗಿ ಕಟ್ಟಲಾಗುತ್ತಿದೆ.

ಬಂಟ್ವಾಳದ ವಿದ್ಯುತ್ ಬಳಕೆದಾರರ ಸಹಕಾರಿ ಸಂಘದ ಬಗ್ಗೆ

೬೧೫. ಶ್ರೀ ರಮಾನಾಥ ರೈ (ಬಂಟ್ವಾಳ).— ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ .—

ಅ) ಬಂಟ್ವಾಳದಲ್ಲಿ ಪ್ರಾರಂಭವಾಗುತ್ತಿರುವ ವಿದ್ಯುತ್ ಬಳಕೆದಾರರ ಸಹಕಾರಿ ಸಂಘ ಯಾವ ಹಂತದಲ್ಲಿದೆ ;

ಆ) ಹಿರಿಯ ಸಹಕಾರಿ ಧುರೀಣರೊಬ್ಬರ ನೇತೃತ್ವದಲ್ಲಿ ಜನರಿಂದ ಪಾಲು ಬಂಡವಾಳ ಸಂಗ್ರಹಿಸಿ ಸಹಕಾರ ಸಂಘ ಸ್ಥಾಪಿಸಿ ಕಾರ್ಯಾರಂಭ ಮಾಡದಿರಲು ಕಾರಣವೇನು ;

ಇ) ಸರ್ಕಾರದ ನೇತೃತ್ವದಲ್ಲಿ ಕೆಲಸ ಮಾಡಬೇಕಾದ ಈ ಸಂಘವು ಕೆಲವು ಜನ ನಾಮ ನಿರ್ದೇಶಕರನ್ನು ಸರ್ಕಾರ ನೇಮಿಸಿ ಜಿಲ್ಲಾಧಿಕಾರಿಯವರನ್ನು ಅಧ್ಯಕ್ಷ ರನ್ನಾಗಿ ಮಾಡಿ ತಟಸ್ಥವಾಗಿರುವುದು ಯಾವ ಕಾರಣಕ್ಕಾಗಿ ?